

# ಚಳಿಗಾಲದ ವಿದ್ಯುದ್ದೀಪಗಳು

■ ರಾಮ್‌ಕದಮ್

ಅಂತೂ ಚಳಿಗಾಲ ಶುರುವಾಯಿತು. ಚಳಿಗಾಲದಲ್ಲಿ ಎಲ್ಲವನ್ನೂ ಬಿಸಿ ಬಿಸಿಯಾಗಿರುವುದನ್ನೇ ಅಪೇಕ್ಷಿಸುತ್ತೇವೆ. ಬಿಸಿ ಕಾಫಿ, ಬಿಸಿ ತಿಂಡಿ, ಬಿಸಿ ಊಟ ಹೀಗೆ ಬಿಸಿಯಾಗಿರುವುದೇ ಬೇಕು ಎನ್ನುತ್ತದೆ ಮನಸು. ಹಾಗೆಯೇ ವಾತಾವರಣವೂ ಬೆಚ್ಚಗಿದ್ದರೆ ಅದೆಷ್ಟು ಹಿತವಾಗಿರುತ್ತದೆ ಅಲ್ಲವೇ? ಚುಮುಚುಮು ಚಳಿಯಲ್ಲಿ ಬೆಚ್ಚನೆಯ ಹವೆ ಸಿಕ್ಕರೆ ಮನಸ್ಸಿಗೆ ಅದೇನೋ ಉಲ್ಲಾಸ. ಕೃತಕ ಶೀತೋಷ್ಣತೆ ಸೃಷ್ಟಿಸುವ ಅನೇಕ ಸಾಧನಗಳು ಮಾರುಕಟ್ಟೆಯಲ್ಲಿವೆ. ಇವುಗಳಲ್ಲಿ ಅಗ್ರಸ್ಥಾನ ಪಡೆದಿರುವುದು ಏರ್ ಕಂಡೀಶನರ್. ಕೇವಲ ತಂಪು ವಾತಾವರಣ ಸೃಷ್ಟಿಸುವುದಕ್ಕಾಗಿ ಮಾತ್ರವಲ್ಲ, ಅದನ್ನು ನಿಯಂತ್ರಿಸುವ ಸಾಧನವೂ ಹೌದು. ಇತ್ತೀಚಿನ ದಿನಗಳಲ್ಲಿ ಶೀತಲ ಅಥವಾ ಉಷ್ಣತೆಯ ವಾತಾವರಣ ಸೃಷ್ಟಿಸುವುದಕ್ಕಾಗಿ ಅನೇಕ ಯಂತ್ರಗಳು ಬಂದಿವೆ. ದುಬಾರಿಯ ಕಾರಣಕ್ಕೆ ಅನೇಕರು ಇಂತಹ ವ್ಯವಸ್ಥೆ ಹೊಂದಲು ಸಾಧ್ಯವಾಗುವುದಿಲ್ಲ. ಅಥವಾ ಅದರ ನಿರ್ವಹಣಾ ಜಂಜಾಟದಲ್ಲಿ ಬೀಳಲು ಜನರು ಬಯಸುವುದೂ ಇಲ್ಲ.

ಅದೂ ಕೈಗೆಟುಕುವಂತಹದ್ದು, ಬೇಕೆಂದಾಗ ಬದಲಿಸಿಕೊಳ್ಳುವ ಅತ್ಯಂತ ಸರಳ ವಿಧಾನದಿಂದ ಕೂಡಿರುವಂತಹದ್ದು. ಕೇವಲ ವಿದ್ಯುದ್ದೀಪಗಳಿಂದ ಮನೆಯ ವಾತಾವರಣವನ್ನು ಬದಲಿಸಲು ಸಾಧ್ಯವಿದೆ. ಬೆಳಕು ಮತ್ತು ಬೆಳಕಿನ ವರ್ಣಗಳಿಗೆ ಭಾವನೆಗಳನ್ನು ಕಟ್ಟಿಹಾಕುವ ಅಥವಾ ಆಕರ್ಷಿಸುವ ಅದ್ಭುತ ಚೈತನ್ಯವಿದೆ. ಬೆಳಕಿನ ಮೂಲಕ ಮಾಡುವ ವರ್ಣ ಸಂಯೋಜನಾ ಕ್ರಿಯೆಯು ಮನಸ್ಸಿನ ಮೇಲೆ ಅದ್ಭುತ ಪ್ರಭಾವ ಬೀರುವ, ಅನಿರ್ವಚನೀಯ ಸಾಮರ್ಥ್ಯ ಹೊಂದಿದೆ. ಬೆಳಕಿನ ದರುಶನ ದಿವ್ಯವಾದುದು. ಅದರಿಂದ ದೊರೆಯುವ ಅನುಭವವು ಚೇತೋಹಾರಿಯಾದುದು. ಕೇವಲ ಬೆಳಕಿನಿಂದ ಶೀತಲವಾದ ಅಥವಾ ಬೆಚ್ಚಗಿನ ನೈಜ ವ್ಯವಸ್ಥೆಯನ್ನು ಸೃಷ್ಟಿಸಲು ಸಾಧ್ಯವಿಲ್ಲದಿದ್ದರೂ, ನೋಟದಲ್ಲಿ ನಮಗೆ ಅಗತ್ಯವಿರುವ ಅನುಭವ ಹೊಂದಲು ಖಂಡಿತ ಸಾಧ್ಯವಿದೆ. ಅದರಿಂದಾಗಿ ಕಣ್ಣುಗಳು ಮತ್ತು ಮನಸ್ಸಿಗೆ ಒಂದಿಷ್ಟಾದರೂ ಸಮಾಧಾನ ಖಂಡಿತ ಸಿಗುತ್ತದೆ. ಇದಕ್ಕಾಗಿ ಏನು ಮಾಡಬಹುದೆಂದು ನೋಡೋಣ.

ಇಂದಿನ ಆಧುನಿಕ ವಿದ್ಯುದ್ದೀಪಗಳ ಲೋಕವು ಕಲ್ಪನೆಗೂ ನಿಲುಕದ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡಿದೆ. ಗಸಗಸೆ ಗಾತ್ರದಿಂದ ಹಿಡಿದು, ಬೃಹತ್ ಗಾತ್ರದ ದೀಪಗಳು ನಮ್ಮ ಅಗತ್ಯಗಳನ್ನು ಪೂರೈಸಲು ಕಟಿಬದ್ಧವಾಗಿವೆ. ಇದನ್ನು ನೀವು ಅನೇಕ ಶೋರೂಮ್‌ಗಳಲ್ಲಿ ಬಳಕೆಯಾಗಿರುವುದನ್ನು ನೋಡಿರುತ್ತೀರಿ. ವಿವಿಧ ಬಣ್ಣಗಳ ಬೆಳಕು ಹರಡುವ ವಿದ್ಯುತ್ ಬಲ್ಬ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಇದರಲ್ಲಿ ಸಾಮಾನ್ಯವಾಗಿ ಮತ್ತು ಹೆಚ್ಚಾಗಿ ಬಳಸುವುದು ಕೂಲ್‌ಲೈಟ್ ಬಲ್ಬ್‌ಗಳು. ಎಂದರೆ, ಇದು ವಾತಾವರಣವನ್ನು ತಂಪಾಗಿರುವಂತೆ, ದಿನದಂತಹ ನೈಜ ಬೆಳಕನ್ನು ಸೂಸುವ ದೀಪವಾಗಿರುತ್ತದೆ. ಹೀಗಾಗಿ ಕಚೇರಿ, ಧ್ಯಾನಮಂದಿರ, ಆಸ್ಪತ್ರೆಗಳು, ಮನೆಗಳಂತಹ ಸ್ಥಳಗಳಲ್ಲಿ ಇದನ್ನು ಹೆಚ್ಚಾಗಿ ಬಳಸಲು ಇಷ್ಟಪಡುತ್ತಾರೆ. ಹೋಟೆಲು, ವಸತಿಗೃಹಗಳು, ಶೋರೂಮ್‌ನಂತಹ ಸ್ಥಳಗಳಲ್ಲಿ ವಾರ್ಮ್‌ಲೈಟ್ ಬಲ್ಬುಗಳನ್ನು ಬಳಸುವುದು ಹೆಚ್ಚಾಗಿ ಕಂಡುಬರುತ್ತದೆ. ಏಕೆಂದರೆ, ಈ ಬೆಳಕಿನಲ್ಲಿ ಹಳದಿ ಛಾಯೆಯಿದ್ದು, ವಸ್ತುಗಳು ಆಕರ್ಷಕವಾಗಿ ಕಾಣುತ್ತವೆ. ಇದೇ ವಾರ್ಮ್‌ಲೈಟ್ ಅಥವಾ ಗೋಲ್ಡ್‌ಲೈಟ್ ಬಲ್ಬುಗಳ ಬೆಳಕು, ವಾತಾವರಣದಲ್ಲಿ ಬೆಚ್ಚನೆಯ ಅನುಭವ ನೀಡುವ ಗುಣವನ್ನು ಹೊಂದಿದೆ. ಪರಿಣಾಮವಾಗಿ ನಾವು ನೋಡುವ ನೋಟವನ್ನು ಬೆಚ್ಚಗಿರುವಂತೆ ಸೃಷ್ಟಿಸುವುದರಲ್ಲಿಯೂ ಇದು ಹೆಚ್ಚು ಸಹಕಾರಿಯಾಗಿರುತ್ತದೆ.

> ಹವಾಮಾನಕ್ಕೆ ತಕ್ಕಂತೆ ಮನೆಯ ವಿದ್ಯುತ್ ದೀಪಗಳನ್ನು ಬೆಳಗುವ ಮೂಲಕ ಕಾಲಮಾನದ ವೈಪರೀತ್ಯವನ್ನು ಹಿತಗೊಳಿಸಬಹುದು.



ಈ ಚಿತ್ರದಲ್ಲಿರುವ ಬಲ್ಬ್‌ಗಳನ್ನು ನೋಡಿ. ಸ್ವರ್ಣದಂತಹ ಹಳದಿ ಬೆಳಕು ಸೂಸುತ್ತಿರುವ ಬಲ್ಬನ್ನು ವಾರ್ಮ್‌ಲೈಟ್ ಅಥವಾ ಗೋಲ್ಡ್‌ಲೈಟ್ ಎಂದು ಕರೆಯಲಾಗುತ್ತದೆ. ಚಂದ್ರನಂತೆ ಹಾಲಿನಂತಹ ತಂಪಾದ ಬೆಳಕು ಸೂಸುತ್ತಿರುವ ಬಲ್ಬಿಗೆ ಕೂಲ್‌ಲೈಟ್ ಎಂದು ಕರೆಯುತ್ತಾರೆ. ಕೂಲ್‌ಲೈಟ್ ಸೂರ್ಯನ ಬೆಳಕಿನಂತಹ ನೈಜ ಕಿರಣಗಳನ್ನು ಸೂಸುತ್ತದೆ. ಈ ಬೆಳಕಿನಲ್ಲಿ ವಸ್ತುಗಳ ವರ್ಣಗಳು, ಅವು ಇರುವ ಸ್ಥಿತಿಯಲ್ಲಿಯೇ ಸ್ಪಷ್ಟವಾಗಿ ಕಾಣುತ್ತವೆ.

ಈ ಚಿತ್ರವನ್ನು ಗಮನಿಸಿ. ಇದು ಮನೆಯೊಂದರ ಲಿವಿಂಗ್ ಹಾಲ್ ಚಿತ್ರವಾಗಿದೆ. ಇದರಲ್ಲಿ ವಾರ್ಮ್‌ಲೈಟ್ ಮಾತ್ರ ಬಳಸಲಾಗಿದೆ. ಪರಿಣಾಮವಾಗಿ ವಾತಾವರಣದಲ್ಲಿ ಚಳಿಯಿದ್ದರೂ, ಬಿಸಿಬೆಳಕಿನ ಪರಿಣಾಮದಿಂದಾಗಿ ಬೆಚ್ಚಗಿನ ಅನುಭವ ಹೊಂದುವಲ್ಲಿ ಯಶಸ್ವಿಯಾಗಿದೆ. ಹೀಗೆಯೇ, ಬೇಸಿಗೆಯ ದಿನಗಳಲ್ಲಿ ಕೂಲ್‌ಲೈಟ್ ಬಳಸಿ ಮನೆಯ ವಾತಾವರಣವು ತಂಪಾಗಿರುವಂತೆ ಕಾಣುವ ಪ್ರಯತ್ನ ಮಾಡಬಹುದು.

ಕೂಲ್‌ಲೈಟ್ ಬಳಸಿ ಬೇಸಿಗೆಯಲ್ಲಿ ತಂಪಾದ ಅನುಭವವನ್ನು ಪಡೆಯಲು ಸಾಧ್ಯವಾಗುತ್ತದೆ. ವಿಶೇಷ ಸಂದರ್ಭಗಳಲ್ಲಿ ಆಹ್ಲಾದಕರವಾದ ವಾತಾವರಣ ಸೃಷ್ಟಿಸಲು, ಕೂಲ್‌ಲೈಟ್ ಮತ್ತು ವಾರ್ಮ್‌ಲೈಟ್ ಎರಡೂ ಬೆಳಕಿನ ಸಂಯೋಜನೆಯನ್ನು ಮಾಡಿ ವಿಶೇಷವಾದ ಮೆರುಗನ್ನು ಪಡೆಯಬಹುದು. ನಿತ್ಯವೂ ಮನೆಯು ಸುಂದರವಾಗಿ ಮತ್ತು ಆಕರ್ಷಕವಾಗಿ ಕಾಣಬೇಕು ಎನ್ನುವವರು ನಿತ್ಯವೂ ಈ ಎರಡೂ ಬೆಳಕಿನ ಸಂಯೋಜನೆ ಮಾಡಿಕೊಂಡು ಮನೆಯ ವಾತಾವರಣದಲ್ಲಿ ತಾಜಾತನವನ್ನು ನಿರಂತರವಾಗಿ ಕಾಯ್ದುಕೊಳ್ಳಬಹುದು.

ಈ ಸಂಯೋಜಿತ ಬೆಳಕು, ದೇವಾಲಯಗಳು, ಆಸ್ಪತ್ರೆಗಳು, ವಸತಿಗೃಹಗಳು, ಕಚೇರಿಯ ನಿರೀಕ್ಷಣಾ ಕೊಠಡಿ, ರಿಸೆಪ್ಷನ್, ಸಾರ್ವಜನಿಕರು ಓಡಾಡುವ ಸ್ಥಳಗಳು, ಮನೆ ಅಥವಾ ಯಾವುದೇ ಕಟ್ಟಡದ ಮುಂಭಾಗದಲ್ಲಿರುವ ಸ್ಥಳ, ಗಿಡಮರಗಳಿರುವ ಸ್ಥಳಗಳಲ್ಲಿ ಹೆಚ್ಚಾಗಿ ಒಪ್ಪುತ್ತದೆ. ರಾತ್ರಿಯ ಸಮಯದಲ್ಲಿ ಮನಸ್ಸಿಗೆ ಮುದನೀಡುವಂತೆ ಮಾಡುವಲ್ಲಿಯೂ ಈ ಎರಡೂ ಬೆಳಕಿನ ಸಂಯೋಜನೆ ಅತ್ಯಂತ ಸಹಕಾರಿಯಾಗುತ್ತದೆ. ■